

ಎಚ್.ಆರ್. ಸುಜಾತಾ

ಕಲೆ: ಎಸ್.ವಿ. ಹೂಗಾರ್



# ದಿಗಂತದಂಚಿನ ನೋಟ

ದಿಗಂತದಂಚಿಗೆ ಹೋಗಿ ನಿಲ್ಲುವೆ
ಬೆಟ್ಟಗುಡ್ಡಗಳು ಉಸಿರಾಡುವುದು
ಕಾಣುತ್ತದೆ.

ಮುಸುಕಿದ ಗಾಳಿಯ ತೇವ
ಮುಖಕ್ಕೆ ಬಡಿದು ದೇಹ ನಡುಗುತ್ತದೆ
ಮೂಗಲ್ಲಿ ನೀರಿಳಿಯುತ್ತದೆ
ಹಬೆಯ ನೀರು ಟಪಗುಡುವ ಹಾಗೆ

ಕೈ ಉಜ್ಜಿ ಹೂಂಕರಿಸಿದರೆ ಬಿಸಿ ಗಾಳಿ
ಬಾಯಿಂದ ಹೊಗೆಯಾಡುತ್ತದೆ
ಕವಿದ ಮಂಜಲ್ಲಿ
ಸುರುಳಿ ಸುತ್ತುತ್ತ ಚಿತ್ರವನ್ನು
ನಾನು ಸೂರ್ಯನ ಕಿರಣವಾಗುತ್ತೇನೆ
ದಟ್ಟ ಮಂಜು ಕವಿದ
ಬೆಟ್ಟಗಳ ತಂಗಿಯಂತೆ ಕೆಳಗಿಳಿಸುತ್ತೇನೆ
ಕರಗುವ ಮಂಜನ್ನು ರೆಪ್ಪೆಯಡಿ

ಸೂರ್ಯನ ಶಾಖ ಹೊತ್ತು ಹಕ್ಕಿ
ಗರಿಗೆದರಿ ಬಾನು ನಿಚ್ಚಳವಾಗುತ್ತಿದೆ
ತಣ್ಣಗಿನ ಕಾಲ ಕಾಲಲ್ಲಿ
ಮುಂದಡಿಯಿಟ್ಟು ಚಲಿಸುತ್ತದೆ

ಬೆಟ್ಟದ ಟೊಪ್ಪಿಯ ಎತ್ತಿಟ್ಟು
ನೀರ ಒಳಗೆ ಚಲಿಸುವ ಸೂರ್ಯ
ಕುಳುಗುಡುವ ಮೀನಿಗೆ ಈಜು ಕಲಿಸುತ್ತಿದ್ದಾನೆ
ಬಿಸಿಯ ಕೋಲು ತಾಕಿಸುತ್ತ

ಬುಳುಬುಳನೆ ಎದ್ದು ಈಜುವ
ಗುಂಪ ಕಂಡು ಹಾರುವ ಹದ್ದಿನ ಹೊಟ್ಟೆ
ಲೊಟ್ಟೆ ಹೊಡೆಯುತ್ತಿದೆ ಆಹಾ ...
ಈಗ ಉಗುರ ಹುರಿಗೊಳಿಸಬೇಕು.

ಅಲೆ ಅಲೆ ! ಅಲ್ಲೋಲ ಕಲ್ಲೋಲ !
ನೀರುನಾಯಿ ನಿದ್ದೆ ಬಿಟ್ಟು ಮೇಲೆದ್ದು
ಚಳಿ ಕಾಯಿಸಲು ಬಂತು
ಉಸುಕಿನ ಮೇಲೆ ಹುರಿಗೊಳ್ಳಲು

ಸೂರ್ಯನ ನೋಟ ನಿಚ್ಚಳವಾಯಿತು